


### ಜಪಾನೀಯರ ಸಾಹಸ

ಡಿ.13ರ 'ಸುಧಾ'ದ 'ಬೆಂಗಳೂರಿನಲ್ಲಿ ಜಪಾನ್' ಮುಖಪುಟ ಲೇಖನ (ಬರಹ: ಇ.ಎಸ್.ಸುಧೀಂದ್ರ ಪ್ರಸಾದ್) ಕುತೂಹಲ ಮೂಡಿಸಿತು. ಜಪಾನೀಯರ ಸಾಹಸ ಮನೋಭಾವಕ್ಕೆ ಈ ಲೇಖನ ಕನ್ನಡಿ ಹಿಡಿದಿದೆ.

-ಎಸ್.ಚನ್ನಪ್ಪ, ಬಿ.ಎಸ್.ಸತೀಶ್, ಮೈಸೂರು

### ಬೇಷ್, ಆದರೆ ಸರಿಯಲ್ಲ!

'ಜಪಾನೀಯರ ಟೀ ಸಮಾರಂಭ' (ಬರಹ: ಶ್ರೀನಾಥ್ ಕೊನೇಟಿ) ಗಮನ ಸೆಳೆಯಿತು. ಆದರೆ ಅತಿಥಿಗಳೆಲ್ಲಾ ಒಂದೇ ಬೋಗುಣಿಯಲ್ಲಿ ಪಾಚ ಕುಡಿಯುವುದೇಕೋ ಸರಿ ಎನಿಸಲಿಲ್ಲ.

-ತರಂಗಿಣಿ, ತುಮಕೂರು

### ಸರಿಯಾದ ವಿಚಾರ ಲಹರಿ

ವೈನತೇಯರ 'ಲೋಕದ ಡೊಂಕು' ವಿಚಾರ ಲಹರಿಯು ಬಸವಣ್ಣನವರ 'ಲೋಕದ ಡೊಂಕ ನೀವೇಕೆ ತಿದ್ದುವಿರಿ?' ವಚನವನ್ನು ಸರಿಯಾಗಿ ವಿವೇಚಿಸಿದೆ. ಅದೇ ಬಸವಣ್ಣನವರ 'ಹೊಲಸು ತಿಂಬುವನೇ ಹೊಲೆಯ, ಕೊಲುವವನೇ ಮಾದಿಗ' ಎಂದರೆ ಜಾತಿಗಳ ಕುರಿತ ಅಪಾರ್ಥಕ್ಕೂ ಕಾರಣವಾಗಬಹುದು. ಸರ್ವ ಸಮಾನತೆ ಪ್ರತಿಪಾದಿಸಿದ ಬಸವಣ್ಣನವರ ಉದ್ದೇಶ ಯಾವುದೇ ಜಾತಿಯನ್ನು ಹೀಗಳೆಯುವುದಾಗಿರಲಿಲ್ಲ. 'ಹೊಲಸು' ಎಂಬುದನ್ನು ಲಂಚ, ಪರಧನ ಎಂತಲೂ; ಕೊಲ್ಲು ಎಂದರೆ ಹಿಂಸೆ ಎಂತಲೂ ಅರ್ಥೈಸಿದರೆ ಬಸವಣ್ಣನವರ ವಚನಗಳನ್ನು ಸರಿಯಾಗಿ ತಿಳಿದುಕೊಂಡಂತೆ ಆಗುತ್ತದೆ.

-ಕೊಹಿಮ, ಬಸರಕೋಡು

### ಅಮರ ಸ್ನೇಹದ ಮಾದರಿ

'ಕಿಡ್ನಿ ದಾನದ ಒಂದು ಕಥೆ' ಡಾ.ವೀಣಾ ಭಾರತಿ ಲೇಖನ ಓದಿ ಬೆರಗಾದೆವು. ಡಾ.ರಮೇಶ್ ಬಿಳಿಮಗ್ಗ ಮತ್ತು ಡಾ.ಗುರುನಾಥ್ ಕಿಲಾರರ ಅಮರ ಸ್ನೇಹ ಮಾದರಿಯಾಗಿದೆ.

ಸು.ವಿಜಯಲಕ್ಷ್ಮಿ, ಶಿವಮೊಗ್ಗ/ ಡಾ.ಕೆ.ಕೆ.ಜಯಚಂದ್ರಗುಪ್ತ, ಹಾಸನ

### ದೀರ್ಘ ದಾಂಪತ್ಯದ ಗುಟ್ಟು

87 ವರ್ಷಗಳ ಸುದೀರ್ಘ ವೈವಾಹಿಕ ಜೀವನದ ಗುಟ್ಟನ್ನು ವಂಡರ್‌ಪುಟದಲ್ಲಿ (ಬರಹ: ಸುಭಾಸ ಯಾದವಾಡ) ಇಂಗ್ಲೆಂಡ್‌ನ ಕರಮ್- ಕತಾರಿ ದಂಪತಿ ಬಹಿರಂಗ ಪಡಿಸಿದ್ದಾರೆ. 'ಇಬ್ಬರ ಮಧ್ಯೆ ಅದಮ್ಯ ವಿಶ್ವಾಸ, ಪರಸ್ಪರ ಅನಿಸಿಕೆ ಹಂಚಿಕೊಳ್ಳುವುದು, ಹಾಸ್ಯ ಚಟಾಕಿ, ಬಂಧುಮಿತ್ರರ ಭೇಟಿ' -ಇವು ಅವರ ಯಶಸ್ಸಿನ ರಹಸ್ಯಗಳು. ವಾಹ್! ಚೆನ್ನಾಗಿವೆ. ಹೊಸತೇನಲ್ಲವಾದರೂ ಯಾರಾದರೂ ಅನುಸರಿಸಲೇಬೇಕು ಎನ್ನುವುದಕ್ಕೆ ಮಾದರಿಯಾಗಿವೆ.

-ಎಚ್.ಎಸ್.ವಿಶ್ವನಾಥ್, ಶಿವಮೊಗ್ಗ

### ಪತ್ತೇದಾರಿ ಮತ್ತೆ ಪ್ರಚಲಿತ

'ಸುಧಾ' ವಾರಪತ್ರಿಕೆಯಲ್ಲಿ ಟಿ.ಕೆ.ರಾಮರಾಯರ ಪತ್ತೇದಾರಿಗಳನ್ನು ಓದಿದ್ದ ನಮಗೆ ಶೈಲಜಾ ಹಾಸನ ಅವರ 'ಏನು ದಾಹ, ಯಾವ ಮೋಹ' ಆ ಮಟ್ಟಕ್ಕೆ ಬರಲಿಲ್ಲ ಎನ್ನುವ ನಿರಾಸೆ ಉಂಟು ಮಾಡಿದರೂ, ಮರೆತೇ ಹೋಗಿದ್ದ ಸಾಹಿತ್ಯದ ಒಂದು ಪ್ರಕಾರ ಪತ್ತೇದಾರಿ ಕಾದಂಬರಿಯನ್ನು ಮತ್ತೆ ಪ್ರಚಲಿತಗೊಳಿಸಿದ 'ಸುಧಾ'ಕ್ಕೆ ಧನ್ಯವಾದಗಳು.

-ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ

### ಗಡಿಬಿಡಿಯಲ್ಲ, ಸರಿಯಾದ ಅಂತ್ಯ

ಪತ್ತೇದಾರಿ ಕಾದಂಬರಿ ಅಂತ್ಯ ಅವಸರವಾಯಿತು, ಗಡಿಬಿಡಿಯಲ್ಲಿ ಮುಗಿಸಿದ್ದಾರೆ ಎಂದು ಕೆಲವರು ಬರೆದಿದ್ದಾರೆ. ಆದರೆ ಈ ರೀತಿ ಇರುವುದೇ ಸರಿ ಎನಿಸಿತು.

ಪಾತ್ರಧಾರಿಗಳ ಮನೋವೈಜ್ಞಾನಿಕ ವಿಶ್ಲೇಷಣೆ ಹಿಡಿಸಿತು. ರಾಮಮೂರ್ತಿ, ಟಿ.ಕೆ.ರಾಮರಾವ್, ಸುದರ್ಶನ ದೇಸಾಯಿ ನಂತರ ಒಂದು ಒಳ್ಳೆಯ ಪತ್ತೇದಾರಿ ಕಾದಂಬರಿ ಓದಿದಂತೆ ಎನಿಸಿತು.

-ಎಚ್.ಎಂ.ಕಾಳಮ್ಮ, ಪತ್ರೇಶ್, ಹಗರಿ ಬೊಮ್ಮನಹಳ್ಳಿ/ ರಾಮಚಂದ್ರ ಹೆಬ್ಬಾರ್, ಕೊಪ್ಪಲಮನೆ/ ಸೀತಾ, ಹಾಸನ/ ಸುಮಲತಾ ಆರ್.ಬಂಗಾಡಿ, ಉಜಿರೆ/ ಪೂರ್ಣಿಮಾ ಮೂರ್ತಿ, ಬೆಂಗಳೂರು







## ನಗೆ ಹೊನಲು

### ಪೂಜಾಗಾಂಧಿ ಕೆ.ಜೆ.ಪಿಗೆ ಸೇರ್ಪಡೆ..




ಜೆಡಿಎಸ್‌ನಲ್ಲಿ ಹುಲ್ಲಿನ ಹೊರೆ ಹೊತ್ತು ಸಾಕಾಗಿ ಹೋಗಿತ್ತು..!



ಪೂಜಾಗಾಂಧಿ ನಿಶ್ಚಿತಾರ್ಥಕ್ಕೆ ಗುಂಡನೂ ಹೋಗಿದ್ದ. ನಿಮ್ಮ ಹತ್ತಿರದ ನೆಂಟರೇ ಕಾಣಿಸ್ತಾ ಇಲ್ವಲ್ಲ ಎಂದ.

ಪೂಜಾಗಾಂಧಿ: ಯಾವ ನೆಂಟರು?

ಗುಂಡ: ಅದೇ ಸೋನಿಯಾ ಗಾಂಧಿ, ಪ್ರಿಯಾಂಕಾ ಗಾಂಧಿ...

ಸಂಗ್ರಹ: ಹಾಡ್ಯ ಬ.ಜಯಾನಂದ